**ತೀರ್ಥಹಳ್ಳಿಯ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ**

**<u>ಸಿ.ಸಿ. ಸಂಖ್ಯೆಃ 1128/2023</u>**

ಪಿರ್ಯಾದಿ : ಮುರಳಿ ಕೃಷ್ಣ

**-ವಿರುದ್ಧ-**

ಆರೋಪಿ : ಸಿರಾಜುದ್ದಿನ್ ಪಿ.,

* * * * *

# <u>ಭಾ ದಂ ಪ್ರ ಸಂ ಕಲಂ.313 ರ ಅಡಿಯಲ್ಲಿ ಆರೋಪಿತನ ಹೇಳಿಕೆ</u>

ಪ್ರ:01: ಈ ಮೊಕದ್ದಮೆಯಲ್ಲಿ ವಿಚಾರಣೆ ಆಗಿರುವ ಅರ್ಜಿದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?
ಉ:

ಪ್ರ:02: ಪ್ರಾಸಾ-01 ಶ್ರೀ ಮುರಳಿ ಕೃಷ್ಣ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನಿಮ್ಮ ಗೃಹಕೃತ್ಯದ ಮತ್ತು ವ್ಯವಹಾರದ ಉದ್ದೇಶಕ್ಕಾಗಿ ಪಿರ್ಯಾದಿಯಿಂದ ದಿನಾಂಕ 06.12.2020 ರಂದು ರೂ.1,00,000/- ಗಳನ್ನು ಸಾಲವನ್ನು ಪಡೆದುಕೊಂಡಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?
ಉಃ

ಪ್ರ:03: ಪ್ರಾಸಾ-01 ರವರು ಮುಂದುವರೆದು ಸಾಕ್ಷ್ಯ ನುಡಿಯುತ್ತಾ ನಂತರದಲ್ಲಿ ಪಿರ್ಯಾದುದಾರರು ನಿಮ್ಮನ್ನು ಸದರಿ ಹಣದ ತೀರುವಳಿಗಾಗಿ ಕೇಳಿದಾಗ ನೀವು ಸದರಿ ಸಾಲದ ಹಣವನ್ನು ಮರುಪಾವತಿಸುವ ಸಂಬಂಧವಾಗಿ ರೂ.1,00,000/- ರಂತೆ ದಿಃ20.01.2021 ರ ದಿನಾಂಕವನ್ನು ನಮೂದಿಸಿದ ನಿಮ್ಮ ಬ್ಯಾಂಕ್ ಖಾತೆಯುಳ್ಳ ಇಂಡಿಯನ್ ಓವರ್ಸೀಸ್ ಬ್ಯಾಂಕ್ ನೀಲೇಶ್ವರ ಶಾಖೆ,

ಕಾಸರಗೋಡು ಜಿಲ್ಲೆಯ ಚೆಕ್ ನಂಃ608942 ಅನ್ನು ಅವರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:04: ಪ್ರಾಸಾ-01 ರವರು ಮುಂದುವರೆದು ಸಾಕ್ಷ್ಯ ನುಡಿಯುತ್ತಾ ಅವರು ಸದರಿ ಚೆಕ್ ಅನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ತೀರ್ಥಹಳ್ಳಿ ಶಾಖೆಯ ಮುಖಾಂತರ ನಗಧೀಕರಣಕ್ಕಾಗಿ ಸಲ್ಲಿಸಿದಾಗ ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ದಿಃ27-01-2021 ರಂದು ಸದರಿ ಚೆಕ್ ವಾಪಸ್ಸು ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:05: ಪ್ರಾಸಾ-01 ರವರು ಮುಂದುವರೆದು ಸಾಕ್ಷ್ಯ ನುಡಿಯುತ್ತಾ ನಂತರ ದಿಃ02-02-2021 ರಂದು ನಿಮಗೆ ವಕೀಲರ ಮುಖಾಂತರ ನೋಟಿಸ್ ಕಳಿಸಿ ಸಾಲದ ಹಣವನ್ನು ಮರುಪಾವತಿ ಮಾಡಬೇಕೆಂದು ಕೇಳಿದ್ದು, ಆದರೆ ನೀವು ಇದುವರೆಗೂ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎನ್ನುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:06: ಈ ಪ್ರಕರಣದ ವಿಚಾರವಾಗಿ ಏನಾದರೂ ಹೇಳುವುದು ಇದೆಯೆ?

ಉಃ

ಪ್ರ:07: ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುತ್ತೀರಾ?

ಉಃ

[ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ ಅವರಿಗೆ ಓದಿ ಹೇಳಿದ ನಂತರ ಉತ್ತರಗಳನ್ನು ಅವರು ಹೇಳಿದಂತೆ ದಾಖಲಿಸಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.]

ದಿನಾಂಕಃ 07-03-2025.

**( ಗೀತಾಮಣಿ )**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತೀರ್ಥಹಳ್ಳಿ.**

ಆರೋಪಿಯ ಸಹಿಃ